# ನಾದಲೀಲೆಯೂ ಸ್ವಾತಂತ್ರ್ಯದ ಲೀಲೆಯೂ

**ಸ್ವಾತಂತ್ರ್ಯದ ಅಂತರ್ಜಲವನ್ನು ಕಾವ್ಯದ ಮೂಲಕ ಬೇಂದ್ರೆಯವರಂತೆ ಕಂಡರಿಸಿದವರು ವಿರಳ. ಸುವರ್ಣ ಸ್ವಾತಂತ್ರ್ಯೋತ್ಸವ ಸಂದರ್ಭದಲ್ಲಿ ಕನ್ನಡ ಕಾವ್ಯ ಗಾರುಡಿಗ ಬೇಂದ್ರೆ ನೆನಪು.**

■ **ಡಾ. ಜಿ. ಕೃಷ್ಣಪ್ಪ**

ಸ್ವತಂತ್ರವೆಂದರೆ ಯಾರ ಅಧಿಕಾರಕ್ಕೂ ಒಳಪಡದೆ ಅನಿರ್ಬಂಧತೆಯಲ್ಲಿ ಇರುವುದು. ಆ ನಿರ್ಬಂಧವಿಲ್ಲದ ಲಕ್ಷಣವನ್ನು ಬಸವಣ್ಣನವರು 'ಕೂಡಲ ಸಂಗಮದೇವಾ ನಿಮ್ಮ ಶರಣರು ಸ್ವತಂತ್ರರು' ಎಂದು ಚಿತ್ರಿಸಿದ್ದಾರೆ. ಆ ಬಗೆಯ ಸ್ವತಂತ್ರರಾಗಿದ್ದವರು ದ.ರಾ. ಬೇಂದ್ರೆ.

ಬೇಂದ್ರೆಯವರು ಹುಟ್ಟಿ ಬೆಳೆದ ಧಾರವಾಡದ ಕಾಮನಕಟ್ಟೆಯಲ್ಲಿ ಸಾಹಿತ್ಯಿಕ, ರಾಷ್ಟ್ರೀಯ ಮತ್ತು ಸಾಂಸ್ಕೃತಿಕ ಚಿಂತನೆಯನ್ನು ಹೊತ್ತ ಶಾಂತಕವಿ, ಕಾವ್ಯಾನಂದ (ನರಸಿಂಹಾಚಾರ್ಯ) ಪುಣೇಕರ, ವೆಂಕಟರಂಗೋಕಟ್ಟಿ, ಗರಗ ಸಿದ್ಧಲಿಂಗಪ್ಪ, ಸೋಂಡಿ ಲಕ್ಷ್ಮಾಧೀಶ, ನಾ.ಶ್ರೀ. ರಾಜಪುರೋಹಿತ, ಕಡಪಾ ರಾಘವೇಂದ್ರರಾವ್ ಮುಂತಾದವರಿದ್ದರು. ಆಲೂರು ವೆಂಕಟರಾಯರ 'ರಾಷ್ಟ್ರೀಯ ಶಿಕ್ಷಣ ಸಂಸ್ಥೆ'ಗೆ ಅತಿರಥಿ ಮಹಾರಥಿಗಳಾದ ರಾಷ್ಟ್ರೀಯ ಮುಖಂಡರು ಭೇಟಿ ಕೊಡುತ್ತಿದ್ದರು. ಅಂತಹ ಪರಿಸರದಲ್ಲಿ ಬೆಳೆದ ಬೇಂದ್ರೆ ಅವರಿಗೆ ರಾಷ್ಟ್ರೀಯ ಭಾವ ಮತ್ತು ಕನ್ನಡಾಭಿಮಾನ ಸಹಜವಾಗಿ ಜೀವದ್ರವ್ಯವಾದವು. ಅವು ಅವರನ್ನು ರಾಷ್ಟ್ರಪ್ರೇಮಿಯಾಗಿ, ಸ್ವತಂತ್ರ ಚಿಂತಕರಾಗಿ, ಕವಿಯಾಗಿ ರೂಪಿಸಿದವು.

## ಬಾಲ್ಯದ ಸ್ವತಂತ್ರ ಮನೋಬಲ

ಬೇಂದ್ರೆಯವರು ಅವರ ತಾಯಿಯ ತಾಯಿ ಗೋದೂಬಾಯಿಯ ಅಕ್ಕರೆಯಲ್ಲಿ ಬೆಳೆದವರು. ಆ ಅಜ್ಜಿ ತುಂಬಾ ಶಿಸ್ತಿನವಳು. ಒಮ್ಮೆ ಬಾಲಕ ಬೇಂದ್ರೆಯವರು ತಮ್ಮನಾದ ರಾಘೂ ಜೊತೆ ದಿವಸವೆಲ್ಲಾ ಆಡಿ ಮನೆಗೆ ತಡವಾಗಿ ಬಂದರು. ಅಜ್ಜಿ ಸಿಟ್ಟಿಗೆದ್ದು ಇಬ್ಬರನ್ನೂ ಹೊರಗೆ ಹಾಕಿದಳು. ಊಟಕ್ಕೆ ಹಾಕಲಿಲ್ಲ. ಕಠೋರ ಶಿಕ್ಷೆ ವಿಧಿಸಿದಳು.

ಬೇಂದ್ರೆ ತಮ್ಮನನ್ನು ಕರೆದುಕೊಂಡು ಆಲೂರ ವೆಂಕಟರಾಯರ ರಾಷ್ಟ್ರೀಯ ಶಾಲೆ ಆರಂಭೋತ್ಸವದಲ್ಲಿಗೆ ಹೋದರು. ಅಲ್ಲಿಯ ಭಾಷಣಕಾರರು ತಮ್ಮ ಭಾಷಣದಲ್ಲಿ ಒಂದು ದೇಶಭಕ್ತಿ ಕಥೆ ಹೇಳಿದರು. ಅದನ್ನು ಮತ್ತೆ ಹೇಳುವ ಹುಡುಗರಿಗೆ ಎರಡು ದುಡ್ಡು ಇನಾಮು ಘೋಷಿಸಿದರು. ಬೇಂದ್ರೆ ಆ ಕಥೆಯನ್ನು ಚೆನ್ನಾಗಿ ಹೇಳಿ ಎರಡು ದುಡ್ಡು ಇನಾಮು ಪಡೆದರು. ಆ ದುಡ್ಡಿಗೆ ಚುರಮುರಿ, ಕೊಬ್ಬರಿ, ಬೆಲ್ಲ ಕೊಂಡು ತಮ್ಮನಿಗೆ ತಿನಿಸಿದರು. ಅದು ಅವರ ಬಾಲ್ಯದ ಸ್ವತಂತ್ರ ಮನೋಬಲ.

## ತಹಸೀಲ್ದಾರ್ ಕೆಲಸ

ಬೇಂದ್ರೆಯವರು ಪೂನಾದ ಫರ್ಗುಸನ್ ಕಾಲೇಜಿನಲ್ಲಿ ಅಭ್ಯಾಸ ಮಾಡಿ, 1918ರಲ್ಲಿ ಬಿ.ಎ. ಪದವೀಧರರಾದರು. ಆ ಪದವಿಗೆ ತಹಸೀಲ್ದಾರ್ ಹುದ್ದೆ ಸಿಗುತ್ತಿತ್ತು. ಆದರೆ ಅವರು ಬ್ರಿಟಿಷರ ಅಡಿಯಲ್ಲಿ ಕೆಲಸ ಮಾಡದಿರಲು ತೀರ್ಮಾನಿಸಿದರು.

ಉತ್ತಮವಾದ ಲೌಕಿಕ ಜೀವನ ನಿರ್ವಹಣೆಗೆ ಸಾಧನವಾಗಿಸಿಕೊಳ್ಳಬಹುದಾದ ವಿದ್ಯೆಯನ್ನು ಅವರು ನಾಡಿನ ವಿದ್ಯಾರ್ಥಿಗಳನ್ನು ರೂಪಿಸುವ ಶಿಕ್ಷಕ ವೃತ್ತಿಗೆ ಮೀಸಲಾಗಿರಿಸಿಕೊಂಡರು. ತಾವು ಓದಿದ ವಿಕ್ಟೋರಿಯಾ ಹೈಸ್ಕೂಲಿನಲ್ಲಿ

ಸ್ವಾತಂತ್ರ್ಯ ಸಂಭ್ರಮ

